# ಪೂರ್ವ ಉಚ್ಚ ಪ್ರಾಥಮಿಕ ಶಿಷ್ಯವೃತ್ತಿ ಪರೀಕ್ಷೆ (5 ನೇ ಇಯತ್ತೆ ), ಫೆಬ್ರುವರಿ 2024

ಆಸನ ಕ್ರಮಾಂಕ- | | | | | | | | | | | |

ಸಂಚ- **A**

**0801**

ಪೇಪರ್ ಕ್ರ - I

ಸಮಯ : 11:00 ರಿಂದ 12:30

ಒಟ್ಟು ಗುಣಗಳು : 150

**ಮಾಧ್ಯಮ - ಕನ್ನಡ**

**ಪ್ರಥಮ ಭಾಷೆ ಮತ್ತು ಗಣಿತ**

ಪುಟಗಳು : 32

***ಪ್ರಶ್ನೆ ಪತ್ರಿಕೆ ಬಿಡಿಸುವುದಕ್ಕಿಂತ ಮುಂಚೆ ಕೆಳಗಿನ ಸೂಚನೆಗಳು ಎಚ್ಚರಿಕೆಯಿಂದ ಓದಿರಿ.***

(1) ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ವಿಭಾಗಗಳಿವೆ. ವಿಭಾಗ **I** ರಲ್ಲಿ ಪ್ರಥಮ ಭಾಷೆಯ **1** ರಿಂದ **25** ಪ್ರಶ್ನೆಗಳಿವೆ ಮತ್ತು ವಿಭಾಗ **II** ರಲ್ಲಿ ಗಣಿತದ **26** ರಿಂದ **75** ಪ್ರಶ್ನೆಗಳಿವೆ. ಹೀಗೆ **75** ಪ್ರಶ್ನೆಗಳು ಇದ್ದು ಎಲ್ಲ ಪ್ರಶ್ನೆಗಳು ಬಿಡಿಸುವುದು ಅವಶ್ಯಕವಾಗಿದೆ.

(2) ಪ್ರತಿಯೊಂದು ಪ್ರಶ್ನೆಗೆ **2** ಗುಣಗಳಿವೆ.

(3) ಪ್ರಶ್ನೆ ಪತ್ರಿಕೆ ಬಿಡಿಸಲು ಒಟ್ಟು **90** ನಿಮಿಷಗಳ ಕಾಲಾವಧಿ ಕೊಡಲಾಗಿದೆ.

(4) ಉತ್ತರಗಳನ್ನು ನೊಂದಾಯಿಸುವ ಸಲುವಾಗಿ ಸ್ವತಂತ್ರ ಉತ್ತರ ಪತ್ರಿಕೆ ಕೊಡಲಾಗಿದೆ. ಪ್ರತಿಯೊಂದು ಪ್ರಶ್ನೆ ಕ್ರಮಾಂಕದ ಮುಂದೆ ನಾಲ್ಕು ಪರ್ಯಾಯವಿರುವ ವರ್ತುಳಗಳನ್ನು ಕೊಡಲಾಗಿದೆ. ಅದರಲ್ಲಿ ಯೋಗ್ಯ ಉತ್ತರವಿರುವ ಪರ್ಯಾಯ ಕ್ರಮಾಂಕದ ವರ್ತುಳವನ್ನು ಉದಾಹರಣೆಯಲ್ಲಿ ತೋರಿಸಿದಂತೆ ನೊಂದಾಯಿಸಿರಿ. ಉದಾ - ಪ್ರಶ್ನೆ ಕ್ರಮಾಂಕ 6ರ ಉತ್ತರ 2 ಆದರೆ ಕೆಳಗೆ ತೋರಿಸಿದಂತೆ ವೃತ್ತವನ್ನು ಪೂರ್ಣವಾಗಿ ತುಂಬಿರಿ.

ಉದಾ. ಪ್ರಶ್ನೆ ಕ್ರ. **6** - ① ● ③ ④

(5) ಕೆಳಗಿನಂತೆ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವದಿಲ್ಲ.

① ② ⊙ ④

(6) ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವರ್ತುಳಗಳಲ್ಲಿ ನೊಂದಾಯಿಸಿದ ಉತ್ತರಗಳು, ತಿದ್ದುಪಡಿ ಮಾಡಿ ನೊಂದಾಯಿಸಿದ ಉತ್ತರಗಳು ಗಮನಕ್ಕೆ ತೆಗೆದುಕೊಳ್ಳಲಾಗುವದಿಲ್ಲ.

(7) ಒಮ್ಮೆ ನೊಂದಾಯಿಸಿದ ಉತ್ತರ ಬದಲಾಯಿಸಲು ಬರುವುದಿಲ್ಲ.

(8) ಪರ್ಯಾಯದ ಉತ್ತರ ಕ್ರಮಾಂಕಗಳನ್ನು ಕಪ್ಪು ಅಥವಾ ನೀಲಿ ಬಾಲ್ ಪೆನ್ನಿನಿಂದ ನೊಂದಾಯಿಸಬೇಕು. ಪೆನ್ಸಿಲಿನಿಂದ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವುದಿಲ್ಲ.

(9) ಪ್ರಶ್ನೆ ಪತ್ರಿಕೆಯ ಪ್ರತಿಯೊಂದು ಪುಟದ ಕೆಳಗೆ ಮತ್ತು ಕೊನೆಯ ಪುಟದ ಮೇಲೆ ಕಚ್ಚಾ ಕೆಲಸಕ್ಕಾಗಿ ಖಾಲಿ ಸ್ಥಳವನ್ನು ಬಿಡಲಾಗಿದೆ ಅಲ್ಲಿಯೇ ಕಚ್ಚಾ ಕಾರ್ಯ ಮಾಡಬೇಕು.

(10) ಪರೀಕ್ಷೆಗೆ ಮರ್ಯಾದಿತ ವೇಳೆ ಇರುವುದರಿಂದ ಒಂದು ಪ್ರಶ್ನೆಯ ಉತ್ತರ ನಿಮಗೆ ಬರದಿದ್ದರೆ, ಮುಂದಿನ ಪ್ರಶ್ನೆ ಬಿಡಿಸಿರಿ. ಕೊನೆಗೆ ವೇಳೆ ಇದ್ದರೆ ಉಳಿದ ಪ್ರಶ್ನೆಗಳ ಬಗ್ಗೆ ಪುನಃ ಪ್ರಯತ್ನ ಮಾಡಿರಿ.

(11) ಯಾವುದೇ ಪ್ರಶ್ನೆಯಲ್ಲಿ ತಪ್ಪು / ದೋಷಗಳಿದ್ದರೆ ಅದರ ಬಗ್ಗೆ ಪರ್ಯವೇಕ್ಷಕ ಅಥವಾ ಪರೀಕ್ಷೆ ಕೇಂದ್ರ ಸಂಚಾಲಕರ ಕಡೆ ವಿಚಾರಣೆ ಮಾಡಬಾರದು.

(12) ಪ್ರಶ್ನೆಯಲ್ಲಿಯ ಯಾವುದೇ ದೋಷ/ತಪ್ಪು/ ಆಕ್ಷೇಪಣೆ ಬಗ್ಗೆ ನಿಮ್ಮ ಲಿಖಿತ ನಿವೇದನೆಯನ್ನು ಶಾಲೆಯವರು ಅಥವಾ ಪಾಲಕರು ಗಟಶಿಕ್ಷಣಾಧಿಕಾರಿ ಅಥವಾ ಶಿಕ್ಷಣಾಧಿಕಾರಿಯವರಿಗೆ ಕಳುಹಿಸಬಾರದು. ಆಯಾ ಶಾಲೆಯ ಲೌಗಿನ್ ನಿಂದ ಆನ್‌ಲೈನ್ ನೊಂದಾಯಿಸಬೇಕು.

(13) MSCE ವೆಬ್‌ಸೈಟ್‌ನಲ್ಲಿ ಮಧ್ಯಂತರ ಉತ್ತರ ಸೂಚಿ ಪ್ರಕಟಿಸಿದ **10** ದಿನಗಳಲ್ಲಿ ದೋಷ/ತಪ್ಪು/ಆಕ್ಷೇಪಣೆ/ಸಮಸ್ಯೆಗಳನ್ನು ಆನ್‌ಲೈನ್‌ನಲ್ಲಿ ನೊಂದಾಯಿಸಬೇಕು.

(14) ಮುದ್ರಣ ದೋಷ ಅಥವಾ ಅನ್ಯ ಕಾರಣಗಳಿಂದ ಪ್ರಶ್ನೆ ತಪ್ಪು ಎಂದು ಕಂಡು ಬಂದರೆ ತಜ್ಞ ಸಮಿತಿಯ ಅಭಿಪ್ರಾಯಕ್ಕೆ ಅನುಸಾರವಾಗಿ ಅದನ್ನು ರದ್ದು ಮಾಡಲಾಗುವುದು.

(15) ಮೂಲ ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲೀಷ್ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆ ಕೊಡಲಾಗಿದೆ, ಮೂಲ ಕನ್ನಡ ಮಾಧ್ಯಮದಲ್ಲಿಯ ಸಂದಿಗ್ಧ ಪ್ರಶ್ನೆಯ ಬಗ್ಗೆ ಇಂಗ್ಲೀಷ್ ಪ್ರಶ್ನೆ ನೋಡಿರಿ.

## ವಿಭಾಗ - I

## ಪ್ರಥಮಭಾಷೆ

**ಪ್ರಶ್ನೆ ಕ್ರಮಾಂಕ 01 ರಿಂದ 03ರ ಸಲುವಾಗಿ ಸೂಚನೆ:**

ಕೆಳಗಿನ ಗದ್ಯಭಾಗವನ್ನು ಓದಿರಿ. ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಉತ್ತರವನ್ನು ಕೊಟ್ಟ ಪರ್ಯಾಯದಿಂದ ಆಯ್ಕೆ ಮಾಡಿರಿ.

ಭೂಮಿಯ ಮುಕ್ಕಾಲು ಭಾಗ ಜಲಾವೃತವಾಗಿದೆ. ಭೂಮಿಯ ಮೇಲಿರುವ ಎಲ್ಲ ನೀರನ್ನೂ ಸೇರಿಸಿ ಜಲಗೋಳ ಎನ್ನುತ್ತೇವೆ. ಸಾಗರಗಳು, ಸಮುದ್ರಗಳು, ಸರೋವರಗಳು, ನದಿಗಳು, ಕೆರೆಗಳು, ಅಂತರ್ಜಲ ಬುಗ್ಗೆಗಳು, ಧ್ರುವಪ್ರದೇಶಗಳ, ಹಿಮಬಂಡೆಗಳು, ಮಣ್ಣಿನ ತೇವಾಂಶ, ಗಾಳಿಯಲ್ಲಿರುವ ತೇವಾಂಶ ಎಲ್ಲ ಈ ಜಲಗೋಳದಲ್ಲಿ ಸೇರಿವೆ.

ಈ ಜಲಗೋಳ ಮಲಿನವಾಗುವುದಕ್ಕೆ ಜಲಮಾಲಿನ್ಯ ಎನ್ನುತ್ತೇವೆ. ಮನುಷ್ಯನ ಕೆಲವು ಚಟುವಟಿಕೆಗಳಿಂದ ನೀರಿನ ಭೌತಗುಣ, ರಾಸಾಯನಿಕ ಗುಣ ಇಲ್ಲವೇ ಜೈವಿಕ ಗುಣಗಳ ಬದಲಾವಣೆಯಾಗಿ, ನೀರು ಜಲಚರ ಜೀವಿಗಳಿಗೆ ವಾಸಿಸಲು ಹಾಗೂ ಇತರ ಜೀವಿಗಳಿಗೆ ಕುಡಿಯಲು ಅನರ್ಹವಾಗುತ್ತದೆ. ಇದೇ ಜಲಮಾಲಿನ್ಯ.

ಕುಡಿಯಲು ಬಳಸುವ ಜಲಮೂಲಕ್ಕೆ ಕೊಳಚೆ ನೀರು ಸೇರದಂತೆ ಎಚ್ಚರ ವಹಿಸಬೇಕು. ತೆರೆದ ಬಾವಿಗಳಿಗೆ ವಾರಕ್ಕೊಮ್ಮೆ ತಪ್ಪದೆ ಕ್ಲೋರಿನ್ ಸೇರಿಸಬೇಕು. ಇದರಿಂದ ತೆರೆದ ಬಾವಿಯಲ್ಲಿರುವ ಬ್ಯಾಕ್ಟೀರಿಯಾಗಳು ಮತ್ತು ವೈರಸ್‌ಗಳು ನಾಶವಾಗುತ್ತವೆ.

**01.** ಮೇಲಿನ ಗದ್ಧ್ಯಭಾಗದಲ್ಲಿ ಎಷ್ಟು ಜಲಗೋಳ ಗಳ ಮಾಹಿತಿ ಬಂದಿದೆ?

(1) ಹನ್ನೆರಡು (2) ಹನ್ನೊಂದು

(3) ಹತ್ತು (4) ಒಂಭತ್ತು

**02.** ಭೂಮಿಯ ಎಷ್ಟು ಭಾಗ ಜಲಾವೃತವಾಗಿದೆ?

(1) ಕಾಲು (2) ಮುಕ್ಕಾಲು

(3) ಅರ್ಧ (4) ಪೂರ್ಣ

**ಕೇವಲ ಕಚ್ಚಾ ಕೆಲಸಕ್ಕಾಗಿ**

**03.** ಬಾವಿಯಲ್ಲಿಯ ಬ್ಯಾಕ್ಟೀರಿಯಾಗಳು ಮತ್ತು ವೈರಸಗಳು ನಾಶವಾಗಬೇಕಾದರೆ ಬಾವಿಗೆ ಯಾವ ರಾಸಾಯನಿಕವನ್ನು ಸೇರಿಸಬೇಕು?

(1) ಡೆಟಾಲ್ (2) ಸ್ಯಾನಿಟೈಜರ

(3) ಕ್ಲೋರಿನ (4) ಆಯೋಡಿನ್

**ಪ್ರಶ್ನೆ ಕ್ರಮಾಂಕ 04 ರಿಂದ 06ರ ಸಲುವಾಗಿ ಸೂಚನೆ:**

ಕೆಳಗಿನ ಜಾಹಿರಾತನ್ನು ಓದಿರಿ. ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಉತ್ತರವನ್ನು ಕೊಟ್ಟ ಪರ್ಯಾಯದಿಂದ ಆಯ್ಕೆ ಮಾಡಿರಿ.

**ಪ್ಲಾಸ್ಟಿಕ್ ನಿಷೇಧಿಸಿರಿ – ಪರ್ಯಾವರಣ ಉಳಿಸಿರಿ!**

ಪ್ಲಾಸ್ಟಿಕ್ ಚೀಲ್ ಬಳಸದಿರಿ!

ಕಾಗದದ ಚೀಲವನ್ನು ಉಪಯೋಗಿಸಿ!

ವಿವಿಧ ಪ್ರಕಾರದ, ವಿವಿಧ ಆಕಾರದ

ತಿಳುವಾದ/ದಪ್ಪವಾದ

**ಕಾಗದದ ಚೀಲಗಳು**

ನಾವು ತಯಾರಿಸುತ್ತೇವೆ.

ವಿವಿಧ ಪ್ರಸಂಗದಲ್ಲಿ, ವಿವಿಧ ಉಪಯೋಗಕ್ಕಾಗಿ

ಬೇಕಾಗುವ ಚೀಲಗಳು

**ನಮ್ಮಲ್ಲಿ ಲಭ್ಯವಿದೆ.**

ಒಮ್ಮೆ ಕರೆ ಮಾಡಿ ನೋಡಿರಿ

ನಿಮಗೆ ಬೇಕಾಗುವ ಚೀಲಗಳು ಕಡಿಮೆದರದಲ್ಲಿ
ಮನೆಗೆತಲುಪಿಸುವೆವು ನಿಮ್ಮ ನಂಬರ ತಿಳಿಸಿರಿ – ವಾಟ್ಸಪ್ಯದಲ್ಲಿ
ಸ್ಯಾಂಪಲ ನೋಡಿರಿ.

**ಸಂಪರ್ಕಿಸಿ** :– 1234567890

**ಕೇವಲ ಕಚ್ಚಾ ಕೆಲಸಕ್ಕಾಗಿ**

**04.** ಮೇಲಿನ ಜಾಹಿರಾತಿನಲ್ಲಿ ಯಾವ ವಸ್ತುವನ್ನು ಉಪಯೋಗಿಸಲು ಹೇಳಲಾಗಿದೆ?

(1) ಪ್ಲಾಸ್ಟಿಕ ಚೀಲ (2) ಕಾಗದಚೀಲ

(3) ಅರಿವೆಯಚೀಲ (4) ಸುತಳಿಯ ಚೀಲ

**05.** ಮಾದರಿ ಚೀಲಗಳು ಎಲ್ಲಿ ನೋಡಲು ದೊರಕುವವು?

(1) ಟೆಲಿಫೋನದಲ್ಲಿ (2) ದೂರದರ್ಶನದಲ್ಲಿ

(3) ಮನೆಯಲ್ಲಿ (4) ಮೋಬಾಯಿಲ್‌ದಲ್ಲಿ

**06.** ಕಾಗದದ ಚೀಲಗಳನ್ನು ಉಪಯೋಗಿಸುವುದರಿಂದ.....

(1) ಪರಿಸರ ಮಾಲಿನ್ಯವಾಗುತ್ತದೆ

(2) ಅದು ಬೇಗನೆ ಹರಿಯುವುದಿಲ್ಲ

(3) ಪರಿಸರ ಮಾಲಿನ್ಯವಾಗದಿರಲು ಸಹಾಯವಾಗುತ್ತದೆ

(4) ಹಣದ ಉಳಿತಾಯ ಆಗುತ್ತದೆ

**07.** ಕೆಳಗಿನ ವಾಕ್ಯದಲ್ಲಿಯ ಸರ್ವನಾಮವನ್ನು ಗುರುತಿಸಿರಿ. ಅದರ ಪರ್ಯಾಯ ಕ್ರಮಾಂಕವಿರುವ ವರ್ತುಳ ತುಂಬಿರಿ.

'ಇನ್ನು ಮುಂದೆ ನಾನು ಯಾವುದೇ ಪ್ರಾಣಿಯ ಬೇಟೆಯಾಡುವುದಿಲ್ಲ'.

(1) ಪ್ರಾಣಿ (2) ಬೇಟೆ

(3) ನಾನು (4) ಯಾವುದೂ ಇಲ್ಲ

**08.** ಕೆಳಗಿನವುಗಳ ಪೈಕಿ ತಪ್ಪಾಗಿರುವ ವಿರುದ್ಧಲಿಂಗದ ಜೋಡಿಯನ್ನು ಗುರುತಿಸಿರಿ.

(1) ಜನಕ-ಜನನಿ (2) ಅಕ್ಕ-ತಂಗಿ

(3) ಸಾಮ್ರಾಟ-ಸಾಮ್ರಾಜ್ಞಿ (4) ಮಗ-ಮಗಳು

**09.** ಕೆಳಗಿನ ವಾಕ್ಯದ ಕಾಲವನ್ನು ಗುರುತಿಸಿ ಯೋಗ್ಯ ಪರ್ಯಾಯ ಕ್ರಮಾಂಕವನ್ನು ಆಯ್ಕೆ ಮಾಡಿರಿ.

'ಸರ್ವೇಶನು ಓಟದ ಸ್ಪರ್ಧೆಯಲ್ಲಿ ಪ್ರಥಮ ಕ್ರಮಾಂಕವನ್ನು ಪಡೆದುಕೊಂಡನು'.

(1) ವರ್ತಮಾನಕಾಲ (2) ಭವಿಷ್ಯತಕಾಲ

(3) ಸಾದಾಕಾಲ (4) ಭೂತಕಾಲ

**ಕೇವಲ ಕಚ್ಚಾ ಕೆಲಸಕ್ಕಾಗಿ**

10. ಕೆಳಗಿನ ವಾಕ್ಯದ ಕೊನೆಗೆ ಯಾವ ವಿರಾಮಚಿಹ್ನೆಯನ್ನು ಕೊಡುವಿರಿ, ಎಂಬುದನ್ನು ನಿರ್ಧರಿಸಿ ಪರ್ಯಾಯದಿಂದ ಅದನ್ನು ಆಯ್ಕೆ ಮಾಡಿರಿ.

ಶಾಲೆಯಲ್ಲಿ ಚಿತ್ರಕಲೆ, ರಂಗೋಲಿ, ಕಥಾಕಥನ ಸ್ಪರ್ಧೆಗಳಾದವು

(1) ಪ್ರಶ್ನಾರ್ಥಕಚಿಹ್ನೆ (2) ಅರ್ಧವಿರಾಮ
(3) ಪೂರ್ಣವಿರಾಮ (4) ಉದ್ಗಾರವಾಚಕ ಚಿಹ್ನೆ

11. 'ಮಕ್ಕಳು' ಈ ಪದದ ಏಕವಚನದ ಶಬ್ದ ಯಾವುದು?

(1) ಮಗನು (2) ಮಗು
(3) ಹುಡುಗ (4) ಹುಡುಗಿ

12. ಕೆಳಗೆ ಕೊಟ್ಟ ಶಬ್ದಗಳಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಶಬ್ದ ಯಾವುದು?

(1) ಅಂತರ್ಜಲ (2) ಅಂತರಂಗ
(3) ಅಂತರ್ಜಾಲ (4) ಅಂತರಾಳ

13. ಕೆಳಗಿನ ಪಡೆನುಡಿಯ ಯೋಗ್ಯ ಅರ್ಥಕೊಡುವ ಪರ್ಯಾಯವನ್ನು ಆರಿಸಿರಿ.

**ಆಟಹೂಡು**

(1) ಆಟವಾಡುವುದು (2) ಉಪಕಾರ ಮಾಡುವುದು

(3) ಆಡುವಾಗ ಹೊಡೆಯುವುದು (4) ಮೋಸದ ಉಪಾಯ ಮಾಡುವುದು.

14. ಬಿಟ್ಟಸ್ಥಳದಲ್ಲಿ ಯೋಗ್ಯಶಬ್ದವನ್ನು ತುಂಬಿ ವಾಕ್ಯವನ್ನು ಪೂರ್ಣಗೊಳಿಸಿರಿ.

.................... ಮಾಡುವವರಿಗೆ ತಾವು ಮಾಡುವ ಕೃತಿಯು ಬೆಳಕಿಗೆ ಬರಬಹುದು ಎಂಬ ಭಯವಿರುತ್ತದೆ.

(1) ಪ್ರಯತ್ನ (2) ದುಷ್ಕೃತ್ಯ
(3) ಅಪಾಯದಕೆಲಸ (4) ಸುಕೃತ್ಯ

15. ಗಾದೆಮಾತು ಅನುಸಾರವಾಗಿ ಕೆಳಗಿನ ವಾಕ್ಯ ಪೂರ್ಣಗೊಳಿಸಿರಿ.

.................... ಇಲ್ಲವೆ ಕೋಶ ಓದು.

(1) ಆಟ ಆಡು (2) ಮಾತನಾಡು
(3) ದೇಶಸುತ್ತು (4) ಶಾಲೆಗೆಹೋಗು

**ಕೇವಲ ಕಚ್ಚಾ ಕೆಲಸಕ್ಕಾಗಿ**

**16.** ಕೆಳಗಿನ ಶಬ್ದಗಳಿಂದ ಒಂದು ಅರ್ಥಪೂರ್ಣ ವಾಕ್ಯ ತಯಾರಿಸಿದಾಗ ಕೊನೆಯಿಂದ ಬರುವ ಎರಡನೇಯ ಶಬ್ದ ಯಾವುದು?

ಪಂದ್ಯವನ್ನು /ಬಹಳಷ್ಟು /ಪೂರ್ಣ /ಮಳೆ /ಕ್ರಿಕೆಟ /ಬೀಳುತ್ತಿರುವುದರಿಂದ /ರದ್ದು / ಮಾಡಲಾಯಿತು.

(1) ಪೂರ್ಣ (2) ರದ್ದು

(3) ಮಳೆ (4) ಪಂದ್ಯವನ್ನು

**17.** ಬಿಟ್ಟಸ್ಥಳದಲ್ಲಿ ಸರ್ವೋತ್ಕೃಷ್ಟ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯವನ್ನು ಪೂರ್ಣಗೊಳಿಸಿರಿ.

ಬಹಳ ಸಮೀಪದಿಂದ ಟಿ.ವ್ಹಿ ನೋಡುವುದರಿಂದ ಕಣ್ಣುಗಳಿಗೆ ...............................

(1) ಆರಾಮವೆನಿಸುತ್ತದೆ (2) ಉಲ್ಲಾಸ ಕೊಡುತ್ತದೆ

(3) ಯೋಗ್ಯ ವೆನಿಸುತ್ತದೆ (4) ತೊಂದರೆ ಯಾಗುತ್ತದೆ

**18.** ಕೆಳಗಿನ ಶಬ್ದದ ಸಮಾನಾರ್ಥಕವಿಲ್ಲದಿರುವ ಶಬ್ದವನ್ನು ಗುರುತಿಸಿರಿ.

**ಚಿನ್ನ**

(1) ಹೇಮು (2) ಬೆಳ್ಳಿ

(3) ಕಾಂಚನ (4) ಸುವರ್ಣ

**19.** ಕೆಳಗಿನ ವಾಕ್ಯದಲ್ಲಿಯ ಗೆರೆಹೊಡೆದ ಶಬ್ದವನ್ನು ಯಾವ ಅರ್ಥದಿಂದ ಉಪಯೋಗಿಸಲಾಗಿದೆವೂ ಆ ಅರ್ಥವಿರುವ ಶಬ್ದವನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

ಜಾತಿಧರ್ಮಗಳಲ್ಲಿಯ ಅಂತರ ಕಡಿಮೆ ಆದರೆ ಮಾತ್ರ ನಾವು ಪ್ರಗತಿ ಸಾಧಿಸುತ್ತೆವೆ.

(1) ಮನಸ್ಸು (2) ಉದ್ದ

(3) ಭೇದ (4) ಸಾಮ್ಯ

**20.** ಕೆಳಗಿನ ಪರ್ಯಾಯಗಳಲ್ಲಿಯ ವಿರುದ್ಧಾರ್ಥಕ ಜೋಡಿ ಇಲ್ಲದ ಶಬ್ದವನ್ನು ಗುರುತಿಸಿರಿ.

(1) ತರುಣ X ವೃದ್ಧ (2) ಸಂಶಯ X ಸಮಾಧಾನ

(3) ಪ್ರಾಚೀನ X ಆಧುನಿಕ (4) ಸಾಮ್ಯ X ಭೇದ

**ಕೇವಲ ಕಚ್ಚಾ ಕೆಲಸಕ್ಕಾಗಿ**

21. ಕೆಳಗಿನ ಶಬ್ದದ ಜೋಡಿ ಶಬ್ದವನ್ನು ಗುರುತಿಸಿರಿ.

**ಧನ**

(1) ದನ (2) ಧಾನ್ಯ

(3) ಹಣ (4) ಋಣ

22. ಕೆಳಗೆ ಕೊಟ್ಟ ಅಕ್ಷರದಿಂದ ತಯಾರಾಗುವ ಅರ್ಥಪೂರ್ಣ ಶಬ್ದದ ನಾಲ್ಕನೆಯ ಅಕ್ಷರ ಯಾವುದು?

**ವೀ ರ ಪ ದ ಧ**

(1) ದ (2) ರ

(3) ವೀ (4) ಧ

23. ಪುರಂದರ ದಾಸರ ಕೃತಿಗಳ ಅಂಕಿತನಾಮ ಯಾವುದು?

(1) ಪುರಂದರ ವಿಠಲ (2) ದಾಸ ಪುರಂದರ

(3) ವಾಸುದೇವ ವಿಠಲ (4) ಯಾವುದೂ ಇಲ್ಲ

24. ಕೆಳಗಿನ ಶಬ್ದಗಳನ್ನು ವರ್ಣಮಾಲೆಯ ಕ್ರಮದಲ್ಲಿ ಬರೆದರೆ ಆರನೆಯ ಕ್ರಮಾಂಕದಲ್ಲಿ ಯಾವ ಶಬ್ದ ಬರುವುದು?

ಪ್ರದಾನ, ಪ್ರದಕ್ಷಿಣೆ, ಪ್ರದೀಪ, ಪ್ರಥಮ, ಪ್ರತೀಕ, ಪ್ರತಿಷ್ಠೆ, ಪ್ರಪಂಚ

(1) ಪ್ರಥಮ (2) ಪ್ರದೀಪ

(3) ಪ್ರದಾನ (4) ಪ್ರದಕ್ಷಿಣೆ

25. ಕೆಳಗೆ ಕೊಟ್ಟಿರುವ ಅಲಂಕಾರಕ ಶಬ್ದದ ಅರ್ಥವನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

**'ಭೀಷ್ಮ ಪ್ರತಿಜ್ಞೆ'**

(1) ಸಂಚು ಮಾಡುವುದು (2) ಸುಳ್ಳು ಪ್ರತಿಜ್ಞೆ

(3) ಸುಮ್ಮನಿರುವುದು (4) ಕಠಿಣ ಪ್ರತಿಜ್ಞೆ

**ಕೇವಲ ಕಚ್ಚಾ ಕೆಲಸಕ್ಕಾಗಿ**

**SECTION - II**

## MATHEMATICS

**26.** Rutuja had some amount. She distributed it among 47 students. When she gave Rs. 50 to each student, Rs. 37 were left with her. How much amount did she have?

(1) Rs. 2350 (2) Rs. 2387

(3) Rs. 2313 (4) Rs. 1897

**27.** 2 lakhs + 13 thousands + 72 hundreds + 38 tens + 13 units = ?

(1) 220593 (2) 213733813

(3) 22033813 (4) 220393

**28.** 2 tens + 3 units + 5 hundredth + 8 one tenth = ?

(1) 23.58 (2) 2358

(3) 238.5 (4) 23.85

**29.** Select the incorrect option from the given alternatives.

1 Ream = _______ papers

(1) 20 quires (2) 40 gross

(3) 480 sheets (4) 40 dozen

**30.** The sum of two numbers is 39.62. If one number is 1.259 then what will be the other number?

(1) 2.703 (2) 27.03

(3) 38.361 (4) 40.879

**SPACE FOR ROUGH WORK**

## ವಿಭಾಗ - II

**ಗಣಿತ**

**26.** ಋತುಜಾಳ ಹತ್ತಿರ ಕೆಲವು ಹಣ ಇತ್ತು. ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ 50 ರೂಪಾಯಿಯಂತೆ 47 ವಿದ್ಯಾರ್ಥಿಗಳಿಗೆ ಹಂಚಲಾಗಿ, ಆವಳ ಹತ್ತಿರ 37 ರೂಪಾಯಿ ಉಳಿದವು; ಹಾಗಾದರೆ ಋತುಜಾಳ ಹತ್ತಿರ ಎಷ್ಟು ರೂಪಾಯಿಗಳು ಇದ್ದವು?

(1) 2350 (2) 2387

(3) 2313 (4) 1897

**27.** 2 ಲಕ್ಷ + 13 ಸಾವಿರ + 72 ಶತಕ + 38 ದಶಕ + 13 ಏಕಕ = ಎಷ್ಟು?

(1) 220593 (2) 213733813

(3) 22033813 (4) 220393

**28.** 2 ದಶಕ + 3 ಏಕಕ + 5 ಶತಾಂಶ + 8 ದಶಾಂಶ = ಎಷ್ಟು?

(1) 23.58 (2) 2358

(3) 238.5 (4) 23.85

**29.** ಕೆಳಗಿನ ಪರ್ಯಾಯಗಳ ಪೈಕಿ ಯಾವ ಪರ್ಯಾಯ ಅಯೋಗ್ಯವಾಗಿದೆ ಎಂಬುದನ್ನು ಆರಿಸಿರಿ.

1 ರಿಮ್ = ________ ಕಾಗದ

(1) 20 ದಸ್ತ (2) 40 ಗ್ರೋಸ್

(3) 480 (4) 40 ಡಝುನ್

**30.** ಎರಡು ಸಂಖ್ಯೆಗಳ ಬೇರೀಜು 39.62 ಇದೆ. ಆದರಲ್ಲಿ ಒಂದು ಸಂಖ್ಯೆ 1.259 ಇದ್ದರೆ ಎರಡನೆಯ ಸಂಖ್ಯೆ ಯಾವುದು?

(1) 2.703 (2) 27.03

(3) 38.361 (4) 40.879

**ಕೇವಲ ಕಚ್ಚಾ ಕೆಲಸಕ್ಕಾಗಿ**

**31.** What will be the simple interest on the principal of Rs. 5000 at 7 p.c.p.a in 3 years?

(1) Rs. 10500 (2) Rs. 105

(3) Rs. 1500 (4) Rs. 1050

**32.** Neha walks daily to complete 5 rounds along a triangular ground whose every side is 100m. Then, How much distance does she cover walking around the ground in one week?

(1) 12 km

(2) 3 km 500 m

(3) 14 km 500 m

(4) 10 km 500 m

**33.** Select the correct option from the following expressions.

(1) $24 - 12 + 3 \times 5 = 27$

(2) $18 - 10 + 3 \times 2 = 2$

(3) $15 \times 12 - 2 + 4 = 176$

(4) $18 + 30 \div 3 \times 2 = 32$

**34.** Which of the following angles has measured less than $\frac{1}{4}$ times of 360°?

(1) Right angle (2) Obtuse angle

(3) Acute angle (4) Reflex angle

**SPACE FOR ROUGH WORK**

**31.** ಪ್ರ.ವ.ಪ್ರ.ಶೆ 7 ದರದಿಂದ 5000 ರೂಪಾಯಿ ಅಸಲಿನ 3 ವರ್ಷದ ಬಡ್ಡಿ ಎಷ್ಟು ರೂಪಾಯಿ ಆಗುವುದು?

(1) 10500 ರೂಪಾಯಿ (2) 105 ರೂಪಾಯಿ

(3) 1500 ರೂಪಾಯಿ (4) 1050 ರೂಪಾಯಿ

**32.** ನೆಹಾ ಪ್ರತಿದಿನ ಪ್ರತಿಯೊಂದು 100 ಮೀಟರ್ ಭುಜ ಇರುವ ತ್ರಿಕೋನಾಕೃತಿ ಮೈದಾನದ ಸುತ್ತ 5 ಸುತ್ತು ನಡೆಯುತ್ತ ಪೂರ್ಣ ಮಾಡುವಳು. ಹಾಗಾದರೆ ಅವಳು ಒಂದು ವಾರದಲ್ಲಿ ಮೈದಾನದ ಸುತ್ತಲೂ ಎಷ್ಟು ಅಂತರವನ್ನು ನಡೆಯುತ್ತ ಪೂರ್ಣಗೊಳಿಸುವಳು?

(1) 12 ಕಿ.ಮೀ

(2) 3 ಕಿ.ಮೀ 500 ಮೀಟರ್

(3) 14 ಕಿ.ಮೀ 500 ಮೀಟರ್

(4) 10 ಕಿ.ಮೀ 500 ಮೀಟರ್

**33.** ಕೆಳಗಿನವುಗಳ ಪೈಕಿ ಪದಾವಲಿಯ ಯೋಗ್ಯ ಉತ್ತರ ಇರುವ ಪರ್ಯಾಯ ಆರಿಸಿರಿ.

(1) $24 - 12 + 3 \times 5 = 27$

(2) $18 - 10 + 3 \times 2 = 2$

(3) $15 \times 12 - 2 + 4 = 176$

(4) $18 + 30 \div 3 \times 2 = 32$

**34.** ಕೆಳಗಿನವುಗಳ ಪೈಕಿ ಯಾವ ಕೋನದ ಅಳತೆ $360^\circ$ ದ $\frac{1}{4}$ ಪಟ್ಟಿಗಿಂತ ಕಡಿಮೆ ಇರುತ್ತದೆ?

(1) ಕಾಟಕೋನ (2) ವಿಶಾಲಕೋನ

(3) ಲಘುಕೋನ (4) ಪ್ರವಿಶಾಲಕೋನ

**ಕೇವಲ ಕಚ್ಚಾ ಕೆಲಸಕ್ಕಾಗಿ**

**35.** There are 1600 students in a school. What will be the number of boys in the school, if there are 48% girls?

(1) 768 (2) 832


(3) 52 (4) 640

**36.** Joseph bought 2 pens at the rate of Rs. 12 and 50 paisa and 5 pencils at the rate of Rs. 5 and 25 paisa. How much amount did he spend on his purchase?

(1) Rs. 17.75 (2) Rs. 51.25

(3) Rs. 35.25 (4) Rs. 37.25

**37.**




(1) $\frac{127}{84}$ (2) $\frac{7}{14}$

(3) $\frac{127}{14}$ (4) $\frac{1}{2}$

**38.** Double of the common factors of two co-prime numbers is _______.

(1) Smaller of the two co-prime numbers.

(2) Greater of the two co-prime numbers.

(3) 1

(4) 2

**SPACE FOR ROUGH WORK**

**35.** ಒಂದು ಶಾಲೆಯ ಒಟ್ಟು ಪಟಸಂಖ್ಯೆ 1600 ಇದೆ. ಒಂದುವೇಳೆ ಶಾಲೆಯಲ್ಲಿ 48% ಹುಡುಗಿಯರಿದ್ದರೆ ಆ ಶಾಲೆಯಲ್ಲಿಯ ಹುಡುಗರ ಸಂಖ್ಯೆ ಎಷ್ಟು?

(1) 768 (2) 832


(3) 52 (4) 640

**36.** ಜೊಸೇಫನು 12 ರೂಪಾಯಿ 50 ಪೈಸೆ ಈ ದರದಿಂದ ಎರಡು ಪೆನ್ನು ಮತ್ತು 5 ರೂಪಾಯಿ 25 ಪೈಸೆ ಈ ದರದಿಂದ ಐದು ಪೆನ್ಸಿಲ್ ಕೊಂಡುಕೊಂಡನು ಹಾಗಾದರೆ ಜೋಸೆಫನು ಒಟ್ಟು ಎಷ್ಟು ರೂಪಾಯಿಗಳ ಖರೀದಿ ಮಾಡಿದನು?

(1) 17.75 ರೂಪಾಯಿ (2) 51.25 ರೂಪಾಯಿ

(3) 35.25 ರೂಪಾಯಿ (4) 37.25 ರೂಪಾಯಿ

**37.**




(1) $\frac{127}{84}$ (2) $\frac{7}{14}$

(3) $\frac{127}{14}$ (4) $\frac{1}{2}$

**38.** ಎರಡು ಸಹಮೂಲ ಸಂಖ್ಯೆಗಳ ಸಾಮಾನ್ಯ ಅವಯವದ ಎರಡು ಪಟ್ಟು ___________ಇರುತ್ತದೆ

(1) ಎರಡು ಸಹಮೂಲ ಸಂಖ್ಯೆಗಳ ಪೈಕಿ ಚಿಕ್ಕ ಸಂಖ್ಯೆ

(2) ಎರಡು ಸಹಮೂಲ ಸಂಖ್ಯೆಗಳ ಪೈಕಿ ದೊಡ್ಡ ಸಂಖ್ಯೆ

(3) 1

(4) 2

**ಕೇವಲ ಕಚ್ಚಾ ಕೆಲಸಕ್ಕಾಗಿ**

**Instruction for Question No. 39 and 40.**

**Solve the questions referring to the pictorial diagram given.**

**Scale : (1**  **= 20 trees)**

| **Participating schools in tree plantation** | **No. of trees planted** |
|---|---|
| Dnyanda Vidyalaya |  |
| Vidya Niketan School |  |
| Z. P. Primary School |  |
| Sadhana Vidyalaya |  |
| Adarsh Vidyalaya |  |

**39.** How many more trees did Dnyanada Vidyalaya plant than Sadhana Vidyalaya?

(1) 1 (2) 9

(3) 20 (4) 50

**40.** How many trees were planted in all, by the participating schools during the tree plantation programme?

(1) 17 (2) 340

(3) 20 (4) 170

**41.** Eight thousand seven hundred and twelve + Twelve thousand seven hundred and fifty = How much?

(1) 21462 (2) 22462

(3) 20962 (4) 21962

**SPACE FOR ROUGH WORK**

**ಪ್ರಶ್ನೆ 39 ಹಾಗೂ ಪ್ರಶ್ನೆ 40**

**ಸೂಚನೆ: ಕೆಳಗಿನ ಚಿತ್ರರೂಪ ಮಾಹಿತಿಯ ಆಧಾರದಿಂದ ಕೆಳಗಿನ ಪ್ರಶ್ನೆಗಳ ಉತ್ತರ ಬರೆಯಿರಿ.**

**(ಪ್ರಮಾಣ : 1  = 20 ಗಿಡಗಳು)**

| ವೃಕ್ಷಾರೋಪಣದಲ್ಲಿ ಸಹಭಾಗಿ ಶಾಲೆ | ಹಚ್ಚಿದ ಗಿಡಗಳ ಸಂಖ್ಯೆ |
|---|---|
| ಜ್ಞಾನದಾ ವಿದ್ಯಾಲಯ |  |
| ವಿದ್ಯಾನಿಕೇತನ ಶಾಲೆ |  |
| ಜಿ.ಪ. ಪ್ರಾಥಮಿಕ ಶಾಲೆ |  |
| ಸಾಧನಾ ವಿದ್ಯಾಲಯ |  |
| ಆದರ್ಶ ವಿದ್ಯಾಲಯ |  |

**39.** ಸಾಧನಾ ವಿದ್ಯಾಲಯಗಿಂತಲೂ ಜ್ಞಾನದಾ ವಿದ್ಯಾಲಯವು ಎಷ್ಟು ಗಿಡಗಳನ್ನು ಹೆಚ್ಚಿಗೆ ಹಚ್ಚಿದೆ?

(1) 1 (2) 9

(3) 20 (4) 50

**40.** ವೃಕ್ಷಾರೋಪಣ ಕಾರ್ಯಕ್ರಮ ಅಂತರ್ಗತ ಸಹಭಾಗಿ ಶಾಲೆಗಳು ಒಟ್ಟು ಎಷ್ಟು ಗಿಡಗಳನ್ನು ಹಚ್ಚಿದವು?

(1) 17 (2) 340

(3) 20 (4) 170

**41.** ಎಂಟು ಸಾವಿರದಾ ಏಳುನೂರಾ ಹನ್ನೆರಡು + ಹನ್ನೆರಡು ಮುಕ್ಕಾಲು ಸಾವಿರ = ಎಷ್ಟು?

(1) 21462 (2) 22462

(3) 20962 (4) 21962

**ಕೇವಲ ಕಚ್ಚಾ ಕೆಲಸಕ್ಕಾಗಿ**

**42.** Soham exchanged 6 notes of Rs. 2000 with equal number of notes of Rs. 100 and Rs. 50. How many notes of Rs. 100 will he get?

(1) 120 (2) 40

(3) 80 (4) 160

**43.** Using the digits 3, 2, 5, 0, 8 atleast once, a smallest 6 digit odd number is formed. What will be the product of the digits at one's and hundred's place?

(1) 24 (2) 40


(3) 15 (4) 16

**44.** Nisha sold an article at Rs. 1730 which she had purchased at Rs. 1350. How much profit or loss did she make?

(1) Rs. 420 profit (2) Rs. 380 loss

(3) Rs. 420 loss (4) Rs. 380 profit

**45.** A cube is formed by folding the adjoining figure. Which digit will not appear on the cube, to the adjacent side of 4?




(1) 16

(2) 36

(3) 25

(4) 9

**SPACE FOR ROUGH WORK**

**42.** ಸೋಹಮನು 2000 ರೂಪಾಯಿಗಳ 6 ನೋಟುಗಳನ್ನು ಬದಲಿಸಿ 100 ರೂಪಾಯಿ ಹಾಗೂ 50 ರೂಪಾಯಿಗಳ ಸಮಾನ ನೋಟುಗಳನ್ನು ತೆಗೆದುಕೊಳ್ಳಲಾಗಿ 100 ರೂಪಾಯಿಯ ಎಷ್ಟು ನೋಟುಗಳು ದೊರೆಯುವವು?

(1) 120 (2) 40

(3) 80 (4) 160

**43.** 3, 2, 5, 0, 8 ಈ ಪ್ರತಿಯೊಂದು ಅಂಕಿಗಳನ್ನು ಕನಿಷ್ಠ ಒಂದು ಸಲ ಉಪಯೋಗಿಸಿ ಆರಂಕಿ ಎಲ್ಲಕ್ಕೂ ಚಿಕ್ಕ ವಿಷಮ ಸಂಖ್ಯೆ ತಯಾರಿಸಲಾಗಿ ಏಕಕ ಹಾಗೂ ಶತಕ ಸ್ಥಾನದ ಅಂಕಗಳ ಗುಣಾಕಾರ ಎಷ್ಟು ಆಗುವುದು?

(1) 24 (2) 40


(3) 15 (4) 16

**44.** ನಿಶಾಳು 1350 ರೂಪಾಯಿಗಳಿಗೆ ತೆಗೆದುಕೊಂಡ ಒಂದು ವಸ್ತುವನ್ನು 1730 ರೂಪಾಯಿಗಳಿಗೆ ಮಾರಿದಳು. ಈ ವ್ಯವಹಾರದಲ್ಲಿ ಅವಳಿಗೆ ಎಷ್ಟು ಲಾಭ ಅಥವಾ ಹಾನಿ ಆಯಿತು?

(1) 420 ರೂಪಾಯಿ ಲಾಭ (2) 380 ರೂಪಾಯಿ ಹಾನಿ

(3) 420 ರೂಪಾಯಿ ಹಾನಿ (4) 380 ರೂಪಾಯಿ ಲಾಭ

**45.** ಬದಿಯ ಆಕೃತಿ ಮಡಿಕೆ ಹಾಕಿ ಘನ ತಯಾರಿಸಿದಾಗ 4 ಈ ಅಂಕೆ ಇರುವ ಪೃಷ್ಠಭಾಗದ ಬದಿಯ ಪೃಷ್ಠಭಾಗದ ಮೇಲೆ ಯಾವ ಅಂಕೆ ಬರುವುದಿಲ್ಲ?




(1) 16

(2) 36

(3) 25

(4) 9

**ಕೇವಲ ಕಚ್ಚಾ ಕೆಲಸಕ್ಕಾಗಿ**

**46.** Which of the following statements is FALSE, with respect to triangular numbers and square numbers.

(1) Half the product of 2 consecutive numbers gives a triangular number.

(2) 1 is triangular as well as square number.

(3) When a number is multiplied by the number itself, the result is a square number.

(4) The product of two consecutive numbers is a triangular number.

**47.** What will be the 5$^{th}$ number, from left side when the 2 digit numbers divisible by 12 are arranged in descending order?

(1) 60 (2) 12

(3) 48 (4) 36

**48.** Out of 12 km 300 m distance, Afroz covered 9 km 500 m distance on bicycle. She covered the remaining distance running. How much distance, did she cover running?

(1) 2.8 km (2) 2.800 m

(3) 3.200 m (4) 21.800 km

**49.** For a trip in the month of May, Swara booked air tickets in advance for Rs. 5780. Due to some reason, she had to cancel the ticket. She got an amount back with the deduction of 30%. How much loss did she suffer?

(1) Rs. 1734 (2) Rs. 1534

(3) Rs. 1724 (4) Rs. 1504

**SPACE FOR ROUGH WORK**

**46.** ತ್ರಿಕೋನಿ ಹಾಗೂ ಚೌರಸ ಸಂಖ್ಯೆಗಳ ಬಗ್ಗೆ ಕೆಳಗಿನವುಗಳ ಪೈಕಿ ಯಾವ ವಿಧಾನ ತಪ್ಪಾಗಿದೆ?

(1) ಎರಡು ಕ್ರಮಾಗತ ಸಂಖ್ಯೆಗಳ ಗುಣಾಕಾರದ ಅರ್ಧಪಟ್ಟು ಮಾಡಿದಾಗ ತ್ರಿಕೋನಿ ಸಂಖ್ಯೆ ದೊರೆಯುವದು.

(2) 1 ಇದು ತ್ರಿಕೋನಿ ಹಾಗೂ ಚೌರಸ ಸಂಖ್ಯೆ ಇದೆ.

(3) ಕೊಟ್ಟ ಸಂಖ್ಯೆಗೆ ಅದೇ ಸಂಖ್ಯೆಯಿಂದ ಗುಣಿಸಿದಾಗ ದೊರೆಯುವ ಸಂಖ್ಯೆ ಚೌರಸ ಸಂಖ್ಯೆಯಾಗಿರುತ್ತದೆ.

(4) ಎರಡು ಕ್ರಮಾಗತ ಸಂಖ್ಯೆಗಳ ಗುಣಾಕಾರ ಮಾಡಿದಾಗ ತ್ರಿಕೋನಿ ಸಂಖ್ಯೆ ದೊರೆಯುವದು.

**47.** 12 ರಿಂದ ವಿಭಾಜ್ಯ ಇರುವ ಎರಡಂಕಿ ಸಂಖ್ಯೆಗಳನ್ನು ಇಳಿಕೆ ಕ್ರಮದಲ್ಲಿ ಮಂಡಿಸಿದಾಗ ಎಡಬದಿಯಿಂದ ಐದನೆಯ ಸಂಖ್ಯೆ ಯಾವುದು?

(1) 60 (2) 12

(3) 48 (4) 36

**48.** ಅಫರೋಜಳು 12 ಕಿ.ಮೀ 300 ಮೀಟರ ಅಂತರದಪೈಕಿ 9 ಕಿ.ಮೀ 500 ಮೀಟರ ಅಂತರವನ್ನು ಸಾಯಕಲದಿಂದ ಪ್ರವಾಸ ಮಾಡಿದಳು. ಉಳಿದ ಅಂತರವನ್ನು ಅವಳು ಓಡುತ್ತ ಪೂರ್ಣ ಮಾಡಿದಳು; ಹಾಗಾದರೆ ಅವಳು ಎಷ್ಟು ಅಂತರವನ್ನು ಓಡುತ್ತ ಪೂರ್ಣ ಮಾಡಿದಳು?

(1) 2.8 ಕಿ.ಮೀ (2) 2.800 ಮೀಟರ

(3) 3.200 ಮೀಟರ (4) 21.800 ಕಿ.ಮೀ

**49.** ಸ್ವರಾಳು ಮೇ ತಿಂಗಳಿನಲ್ಲಿ ಪ್ರವಾಸಕ್ಕೆ ಹೋಗುವ ಸಲುವಾಗಿ ಪುಣೆಯಿಂದ ದಿಲ್ಲಿ ವಿಮಾನದ ಮುಂಗಡ ಟಿಕೇಟನ್ನು 5780 ರೂಪಾಯಿಗೆ ತೆಗೆದಳು. ಆದರೆ ಕೆಲವು ಕಾರಣದಿಂದಾಗಿ ಅವಳು ಆ ಟಿಕೇಟನ್ನು ರದ್ದು ಮಾಡಿದಳು. ಆಗ 30% ಹಣ ಮುರಿದುಕೊಂಡು ಉಳಿದ ಹಣ ಅವಳಿಗೆ ದೊರೆಯಿತು ಹಾಗಾದರೆ ಸ್ವರಾಳಿಗೆ ಎಷ್ಟು ನಷ್ಟ ಆಯಿತು?

(1) 1734 ರೂಪಾಯಿ (2) 1534 ರೂಪಾಯಿ

(3) 1724 ರೂಪಾಯಿ (4) 1504 ರೂಪಾಯಿ

**ಕೇವಲ ಕಚ್ಚಾ ಕೆಲಸಕ್ಕಾಗಿ**

**50.** Which of the following statements is false?

(1) Cuboid is three dimensional.

(2) Cuboid has 12 edges.

(3) All surfaces of a cuboid are square in shape.


(4) Length, breadth and height of a cuboid can be measured.

**51.** How will you write twenty two thousand two hundred and fifty in international number system?

(1) 22150 (2) २२१५०

(3) २२२५० (4) 22250

**52.** What is the perimeter of the adjacent figure?




(1) 16 cm (2) 36 cm

(3) 18 cm (4) 30 cm

**SPACE FOR ROUGH WORK**

**50.** ಕೆಳಗಿನವುಗಳ ಪೈಕಿ ಯಾವ ವಿಧಾನ ತಪ್ಪಾಗಿದೆ?

(1) ಇಷ್ಟಿಕಾಚಿತಿಯು ತ್ರಿಮಿತಿಯದ್ದಾಗಿರುತ್ತದೆ.

(2) ಇಷ್ಟಿಕಾಚಿತಿಗೆ 12 ಅಂಚುಗಳು ಇರುತ್ತವೆ.

(3) ಇಷ್ಟಿಕಾಚಿತಿಯ ಎಲ್ಲ ಪೃಷ್ಠಗಳು ಚೌರಸಾಕಾರ ವಾಗಿರುತ್ತವೆ.


(4) ಇಷ್ಟಿಕಾಚಿತಿಯ ಉದ್ದ, ಅಗಲ ಹಾಗೂ ಎತ್ತರ ಅಳೆಯಲು ಬರುತ್ತದೆ.

**51.** 'ಇಪ್ಪತ್ತೆರಡು ಕಾಲು ಸಾವಿರ' ಈ ಸಂಖ್ಯೆಯನ್ನು ಅಂತರರಾಷ್ಟ್ರೀಯ ಸಂಖ್ಯಾ ಚಿಹ್ನೆಯಲ್ಲಿ ಹೇಗೆ ಬರೆಯುವಿರಿ?

(1) 22150 (2) ೨೨೧೫೦

(3) ೨೨೨೫೦ (4) 22250

**52.** ಕೆಳಗಿನ ಆಕೃತಿಯ ಪರಿಮಿತಿ ಎಷ್ಟು ಸೆ.ಮೀ ಇದೆ?




(1) 16 ಸೆ.ಮೀ (2) 36 ಸೆ.ಮೀ

(3) 18 ಸೆ.ಮೀ (4) 30 ಸೆ.ಮೀ

**ಕೇವಲ ಕಚ್ಚಾ ಕೆಲಸಕ್ಕಾಗಿ**

**53.** Dilip purchased a motorcycle for Rs. 35900. He spent Rs. 3780 on its repairs. After some days, he sold the motorcycle for Rs. 40750. How much profit did he make in this transaction?

(1) Rs. 1070 (2) Rs. 4850

(3) Rs. 36970 (4) Rs. 32120

**54.** At a ration shop, 85 sacks of wheat, 50 sacks of rice and 15 sacks of tur dal was available for sale. If every sack contained 40 kg of grains, How much grains in kilograms, were available for sale?

(1) 150 kg (2) 600 kg

(3) 6000 kg (4) 4000 kg

**55.** Which amongst > , < or = will be appropriate to fill in the boxes between, the below given fractions.

$\frac{3}{4} \; \square \; \frac{6}{8} \; \square \; \frac{7}{9}$

(1) = , > (2) < , <

(3) > , < (4) = , <

**56.** Pick out the wrong statement from the given statements.

(1) The product of any number and zero is zero.

(2) Multiplication of odd number with other odd number results in even number.

(3) Multiplicant × Multiplier = 0. Then either Multiplicant or Multiplier is zero.

(4) When same digit appears at the one's place in two numbers then 8 will not appear in one's place of their product.

**SPACE FOR ROUGH WORK**

**53.** ದಿಲೀಪನು 35900 ರೂಪಾಯಿಗಳಿಗೆ ಒಂದು ಮೋಟರ್ ಸೈಕಲ್ ಖರೀಧಿಸಿದನು. ಅದರ ರಿಪೇರಿಗಾಗಿ 3780 ರೂಪಾಯಿ ಖರ್ಚು ಮಾಡಿದನು. ಕೆಲವುದಿನಗಳ ನಂತರ ಅವನು ಆ ಮೋಟರ್ ಸೈಕಲ್‌ನ್ನು 40750 ರೂಪಾಯಿಗಳಿಗೆ ಮಾರಿದನು; ಹಾಗಾದರೆ ದಿಲೀಪನಿಗೆ ಆವ್ಯವಹಾರದಲ್ಲಿ ಎಷ್ಟು ಲಾಭ ಆಯಿತು?

(1) 1070 ರೂಪಾಯಿಗಳು (2) 4850 ರೂಪಾಯಿಗಳು

(3) 36970 ರೂಪಾಯಿಗಳು (4) 32120 ರೂಪಾಯಿಗಳು

**54.** ಒಂದು ಅಗ್ಗದರದ ಧಾನ್ಯ ಅಂಗಡಿಯಲ್ಲಿ 85 ಚೀಲ ಗೋಧಿ, 50 ಚೀಲ ಅಕ್ಕಿ, 15 ಚೀಲ ತೊಗರೆಬೇಳೆ ಮಾರಾಟಕ್ಕಾಗಿ ತರಲಾಯಿತು. ಒಂದು ವೇಳೆ ಪ್ರತಿಯೊಂದು ಚೀಲದಲ್ಲಿ 40 ಕ್ರಿ.ಗ್ರಾ್ಯಂ ಧಾನ್ಯ ಇದ್ದರೆ ಆ ಅಂಗಡಿಯಲ್ಲಿ ಒಟ್ಟು ಎಷ್ಟು ಕಿ.ಗ್ರಾ್ಯಂ ಧಾನ್ಯ ಮಾರಾಟಕ್ಕಾಗಿ ತರಲಾಯಿತು?

(1) 150 ಕಿ.ಗ್ರಾ್ಯಂ (2) 600 ಕಿ.ಗ್ರಾ್ಯಂ

(3) 6000 ಕಿ.ಗ್ರಾ್ಯಂ (4) 4000 ಕಿ.ಗ್ರಾ್ಯಂ

**55.** ಕೆಳಗಿನ ಅಪೂರ್ಣಾಂಕಗಳ ನಡುವೆ ಇರುವ ಚೌಕಟ್ಟಿನಲ್ಲಿ > , < ಅಥವಾ = ಇವುಗಳ ಪೈಕಿ ಯಾವ ಚಿಹ್ನೆ ಯೋಗ್ಯ ವಾಗುವದು?

$\frac{3}{4} \square \frac{6}{8} \square \frac{7}{9}$

(1) = , > (2) < , <

(3) > , < (4) = , <

**56.** ಕೊಟ್ಟ ವಿಧಾನಗಳ ಪೈಕಿ ತಪ್ಪಾದ ವಿಧಾನ ಗುರುತಿಸಿರಿ.

(1) ಯಾವುದೇ ಸಂಖ್ಯೆ ಹಾಗೂ ಶೂನ್ಯ ಇವುಗಳ ಗುಣಾಕಾರ ಶೂನ್ಯ ಬರುವುದು.

(2) ಯಾವುದೇ ವಿಷಮ ಸಂಖ್ಯೆಗೆ ವಿಷಮ ಸಂಖ್ಯೆಯಿಂದ ಗುಣಿಸಲಾಗಿ ಉತ್ತರ ಸಮ ಸಂಖ್ಯೆ ಬರುವುದು.

(3) ಗುಣ್ಯ × ಗುಣಕ = 0 ಇದ್ದರೆ ಗುಣ್ಯ ಅಥವಾ ಗುಣಕ ಶೂನ್ಯ ಇರುತ್ತವೆ

(4) ಯಾವುದೇ ಎರಡು ಸಂಖ್ಯೆಗಳ ಏಕಕಸ್ಥಾನದಲ್ಲಿ ಸಮಾನ ಅಂಕೆ ಇದ್ದರೆ ಗುಣಾಕಾರದ ಏಕಕಸ್ಥಾನದಲ್ಲಿ 8 ಈ ಅಂಕೆ ಬರುವುದಿಲ್ಲ.

**ಕೇವಲ ಕಚ್ಚಾ ಕೆಲಸಕ್ಕಾಗಿ**

**57.** Roshni needed 1 hr. 30 min. to travel from Nagpur to Wardha. She took rest for 15 min. She completed Wardha to Yavatmal distance journey in 1 hr. 50 min. If Roshni had started from Nagpur at 10 in the morning then at what time will she reach Yavatmal?

(1) 20 min. past 1
(2) 35 min. past 3
(3) 35 min. past 1
(4) 35 min. past 12

**58.** The labour charge to paint a rectangular wall at the rate of Rs. 45 per sq.m. is Rs. 2700. If the length of the wall is 15 m, what must be the breadth of the wall?

(1) 3 m
(2) 180 m
(3) 60 m
(4) 4 m

**59.** 12 kg + 1350 gm = How much?

(1) 1362 kg
(2) 1362 gm
(3) 13.350 kg
(4) 13.350 gm

**60.** Yogesh received Rs. 72 and 5 paisa as interest on his deposits in bank. How will you write this in decimal form?

(1) Rs. 72.05
(2) Rs. 72.5
(3) Rs. 72.50
(4) Rs. 72.005

**61.** A merchant bought 300 sacks of wheat at Rs. 2500 per quintal. Due to heavy rains, 70 sacks of grains were destroyed. He sold the remaining sacks at the rate of Rs. 2700 per quintal. How much profit or loss did he make in this transaction?

(1) Rs. 60000 profit
(2) Rs. 129000 loss
(3) Rs. 175000 loss
(4) Rs. 46000 profit

**SPACE FOR ROUGH WORK**

**57.** ರೋಶನಿಗೆ ನಾಗಪೂರ ದಿಂದ ವರ್ಧಾ ಈ ಪ್ರವಾಸಕ್ಕಾಗಿ 1 ತಾಸು 30 ಮಿನಿಟುಗಳು ಬೇಕಾದವು. 15 ಮಿನಿಟುಗಳ ವಿಶ್ರಾಂತಿ ಪಡೆದು ಅವಳು ವರ್ಧಾದಿಂದ ಯವತಮಾಳ ಈ ಪ್ರವಾಸ 1 ತಾಸು 50 ಮಿನಿಟುಗಳಲ್ಲಿ ಪೂರ್ಣ ಮಾಡಿದಳು. ಒಂದು ವೇಳೆ ರೋಶನಿಯು ಬೆಳಿಗ್ಗೆ 10 ಗಂಟೆಗೆ ನಾಗಪೂರದಿಂದ ಹೊರಟಿದ್ದರೆ ಅವಳು ಯವತಮಾಳಕ್ಕೆ ಎಷ್ಟು ಗಂಟೆಗೆ ಮುಟ್ಟುವಳು?

(1) 1 ಗಂಟೆ 20 ಮೀ. (2) 3 ಗಂಟೆ 35 ಮೀ.

(3) 1 ಗಂಟೆ 35 ಮೀ. (4) 12 ಗಂಟೆ 35 ಮೀ.

**58.** ಒಂದು ಆಯತಾಕಾರ ಗೋಡೆಗೆ ಬಣ್ಣ ಕೊಡುವುದಕ್ಕಾಗಿ 45 ರೂಪಾಯಿ ಪ್ರತಿ ಚೌರಸಮೀಟರ ದರದಿಂದ 2700 ರೂಪಾಯಿ ಕೂಲಿ ಕೊಡಬೇಕಾಗುತ್ತದೆ. ಒಂದು ವೇಳೆ ಗೋಡೆಯ ಉದ್ದ 15 ಮೀಟರ ಇದ್ದರೆ ಆ ಗೋಡೆಯ ಅಗಲ ಎಷ್ಟು ಮೀಟರ ಇರುವುದು?

(1) 3 ಮೀಟರ (2) 180 ಮೀಟರ

(3) 60 ಮೀಟರ (4) 4 ಮೀಟರ

**59.** 12 ಕಿ.ಗ್ರ್ಯಾಂ + 1350 ಗ್ರ್ಯಾಂ = ಎಷ್ಟು?

(1) 1362 ಕಿ.ಗ್ರ್ಯಾಂ (2) 1362 ಗ್ರ್ಯಾಂ

(3) 13.350 ಕಿ.ಗ್ರ್ಯಾಂ (4) 13.350 ಗ್ರ್ಯಾಂ

**60.** ಯೋಗೇಶನಿಗೆ ಬ್ಯಾಂಕಿನಲ್ಲಿಟ್ಟ ಠೇವಣಿಯಮೇಲೆ ಎಪ್ಪತ್ತೆರಡು ರೂಪಾಯಿ ಐದು ಪೈಸೆ ಬಡ್ಡಿ ದೊರೆಯಿತು. ಹಾಗಾದರೆ ಈ ಸಂಖ್ಯೆಯನ್ನು ದಶಾಂಶ ಪದ್ದತಿಯಲ್ಲಿ ಹೇಗೆ ಬರೆಯಲಾಗುವುದು?

(1) 72.05 ರೂಪಾಯಿ (2) 72.5 ರೂಪಾಯಿ

(3) 72.50 ರೂಪಾಯಿ (4) 72.005 ರೂಪಾಯಿ

**61.** ಒಬ್ಬ ವ್ಯಾಪಾರಿಯು 2500 ಪ್ರತಿ ಕ್ವಿಂಟಲ್ ದರದಿಂದ ಗೋಧಿಯ 300 ಚೀಲಗಳನ್ನು ತೆಗೆದುಕೊಂಡನು. ಅತೀವೃಷ್ಟಿಯಿಂದಾಗಿ ಅವುಗಳಲ್ಲಿ 70 ಚೀಲ ಧಾನ್ಯ ನಾಶವಾಯಿತು. ಉಳಿದ ಗೋಧಿಯ ಚೀಲಗಳನ್ನು ಅವನು 2700 ರೂಪಾಯಿ ಪ್ರತಿ ಕ್ವಿಂಟಲ್ ದರದಿಂದ ಮಾರಿದನು. ಹಾಗಾದರೆ ಅವನಿಗೆ ಈ ವ್ಯವಹಾರದಲ್ಲಿ ಲಾಭವಾಯಿತೋ ಅಥವಾ ಹಾನಿ ಹಾಗೂ ಎಷ್ಟು?

(1) 60000 ರೂಪಾಯಿ ಲಾಭ (2) 129000 ರೂಪಾಯಿ ಹಾನಿ

(3) 175000 ರೂಪಾಯಿ ಹಾನಿ (4) 46000 ರೂಪಾಯಿ ಲಾಭ

**ಕೇವಲ ಕಚ್ಚಾ ಕೆಲಸಕ್ಕಾಗಿ**

**62.** For flood victims at Kolhapur, 5 social organisations contributed Rs. 12870, Rs. 13850, Rs. 9640, Rs. 25390, Rs. 7450 respectively. How much total relief fund was collected?

(1) Rs. 126250 (2) Rs. 222910

(3) Rs. 66750 (4) Rs. 69200

**63.** During a 3 day Drama festival, at the auditorium, out of 1250 seats, 12% seats remained vacant on the first day, 10% seats were vacant on second day and on third day 4% seats remained vacant. How many seats remained vacant in total, during the three days?

(1) 150 (2) 250

(3) 325 (4) 350

**64.** If 15$^{th}$ March is Monday, then which day will occur 5 times, in that month?

(1) Thursday (2) Wednesday

(3) Friday (4) Saturday

**65.** If the radius of a circle is $\frac{7}{2}$ cm, then what is its diameter in cms?

(1) 3.5 cm (2) 14 cm

(3) 3.5 m (4) 7 cm

**66.** The numbers 78312, 78135, 78351 and 78531 are arranged in descending order. What will be the sum of the 1$^{st}$ number and 3$^{rd}$ number from the right side?

(1) 156882 (2) 156447

(3) 156843 (4) 156446

**SPACE FOR ROUGH WORK**

62. ಕೊಲ್ಹಾಪೂರದಲ್ಲಿಯ ಪೂರಗ್ರಸ್ತರ ಸಹಾಯಕ್ಕಾಗಿ ಐದು ಸೇವಾಭಾವಿ ಸಂಘಟನೆಯವರು ಅನುಕ್ರಮವಾಗಿ ₹12870, ₹13850, ₹9640, ₹25390, ₹7450 ಯ ಸಹಾಯ ಮಾಡಿದರು. ಹಾಗಾದರೆ ಒಟ್ಟು ಎಷ್ಟು ರೂಪಾಯಿ ಸಹಾಯನಿಧಿ ಸಂಗ್ರಹವಾಯಿತು?

(1) 126250 ರೂಪಾಯಿ
(2) 222910 ರೂಪಾಯಿ
(3) 66750 ರೂಪಾಯಿ
(4) 69200 ರೂಪಾಯಿ

63. ಮೂರು ದಿನದ ನಾಟ್ಯ ಮಹೋತ್ಸವದಲ್ಲಿ ನಾಟ್ಯ ಸಭಾಗೃಹದ 1250 ಆಸನಗಳಲ್ಲಿ ಮೊದಲನೆಯ ದಿನ 12% ಎರಡನೆಯ ದಿನ 10% ಹಾಗೂ ಮೂರನೆಯ ದಿನ 4% ಆಸನಗಳು ಖಾಲಿ ಉಳಿದವು; ಹಾಗಾದರೆ ಮೂರು ದಿನಗಳಲ್ಲಿ ಒಟ್ಟು ಎಷ್ಟು ಆಸನಗಳು ಖಾಲಿ ಉಳಿದವು?

(1) 150
(2) 250
(3) 325
(4) 350

64. 15 ಮಾರ್ಚ ದಂದು ಸೋಮವಾರ ಇದೆ. ಹಾಗಾದರೆ ಆ ತಿಂಗಳಿನಲ್ಲಿ ಯಾವ ವಾರ ಐದು ಸಲ ಬರುವುದು?

(1) ಗುರುವಾರ
(2) ಬುಧವಾರ
(3) ಶುಕ್ರವಾರ
(4) ಶನಿವಾರ

65. ಒಂದು ವರ್ತುಳದ ತ್ರಿಜ್ಯ $\frac{7}{2}$ ಸೆ.ಮೀ ಇದೆ. ಹಾಗಾದರೆ ಅದರ ವ್ಯಾಸ ಎಷ್ಟು ಸೆ.ಮೀ ಇರುವುದು?

(1) 3.5 ಸೆ.ಮೀ
(2) 14 ಸೆ.ಮೀ
(3) 3.5 ಮೀ
(4) 7 ಸೆ.ಮೀ

66. 78312, 78135, 78351, 78531 ಈ ಸಂಖ್ಯೆಗಳನ್ನು ಇಳಿಕೆ ಕ್ರಮದಲ್ಲಿ ಬರೆದಾಗ ಅವುಗಳಲ್ಲಿಯ ಮೊದಲನೆಯ ಹಾಗೂ ಬಲಬದಿಯಿಂದ ಮೂರನೆಯ ಸಂಖ್ಯೆಗಳ ಬೇರೀಜು ಎಷ್ಟು?

(1) 156882
(2) 156447
(3) 156843
(4) 156446

**ಕೇವಲ ಕಚ್ಚಾ ಕೆಲಸಕ್ಕಾಗಿ**

**67.** Fifteen litres two hundred ml. – Thirteen litres five hundred and thirty ml. = How much?

(1) Two litres six hundred and seventy ml.

(2) 1.670 ml.

(3) One litre six hundred and seventy ml.

(4) 2.670 ml.

**68.** Which of the following is completely divisible by 3?

(1) 7553 (2) 1733

(3) 2352 (4) 9851

**69.** Which of the following expressions is equivalent to the fraction $\frac{14}{35}$?

(1) $\frac{3}{7} - \frac{2}{7}$ (2) $\frac{8}{5} - \frac{6}{5}$

(3) $\frac{4}{5} + \frac{3}{5}$ (4) $\frac{5}{7} + \frac{2}{7}$

**70.** Pranav wants to buy a plot for Rs. 2417300 but he has Rs. 712300 with him. He will have to arrange the remaining amount from bank loan. How much amount should he borrow as loan?

(1) Rs. Seventeen lakhs five thousand

(2) Rs. Seventeen lakhs fifty thousand

(3) Rs. Seventeen lakhs

(4) Rs. Seventeen lakhs five thousand and three hundred

**71.** 12 hours 18 min. – 6 hrs. 45 min. = how much?

(1) 5 hrs. 73 min. (2) 5 hrs. 33 min.

(3) 5 hrs. 78 min. (4) 6 hrs. 27 min.

**SPACE FOR ROUGH WORK**

**67.** ಹದಿನೈದು ಲೀಟರ ಎರಡುನೂರು ಮಿ.ಲೀ – ಹದಿ ಮೂರು ಲೀಟರ ಐದುನೂರಾ ಮೂವತ್ತು ಮಿ.ಲೀ = ಎಷ್ಟು?

(1) ಎರಡು ಲೀಟರ ಆರುನೂರಾ ಎಪ್ಪತ್ತು ಮಿ.ಲೀ

(2) 1.670 ಮಿ.ಲೀ

(3) ಒಂದು ಲೀಟರ ಆರುನೂರಾ ಎಪ್ಪತ್ತು ಮಿ.ಲೀ

(4) 2.670 ಮಿ.ಲೀ.

**68.** ಕೆಳಗಿನವುಗಳಲ್ಲಿ ಯಾವ ಸಂಖ್ಯೆಗೆ ಮೂರರಿಂದ ನಿಶ್ಶೇಷವಾಗಿ ಭಾಗ ಹೋಗುತ್ತದೆ?

(1) 7553 (2) 1733

(3) 2352 (4) 9851

**69.** $\frac{14}{35}$ ಈ ಅಪೂರ್ಣಾಂಕವು ಯಾವ ಪರ್ಯಾಯದ ಸಮಮೂಲ್ಯ ಅಪೂರ್ಣಾಂಕವಾಗಿದೆ?

(1) $\frac{3}{7}-\frac{2}{7}$ (2) $\frac{8}{5}-\frac{6}{5}$

(3) $\frac{4}{5}+\frac{3}{5}$ (4) $\frac{5}{7}+\frac{2}{7}$

**70.** ಪ್ರಣವನಿಗೆ 2417300 ರೂಪಾಯಿಯ ಪ್ಲೌಟ ಖರೀದಿ ಮಾಡುವುದಿದೆ. ಆದರೆ ಅವನ ಹತ್ತಿರ 712300 ರೂಪಾಯಿಗಳಿವೆ. ಉಳಿದ ಹಣಕ್ಕಾಗಿ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದಿದೆ. ಹಾಗಾದರೆ ಅವನಿಗೆ ಎಷ್ಟು ಹಣ ಸಾಲ ತೆಗೆದುಕೊಳ್ಳಬೇಕಾಗುವುದು?

(1) ಹದಿನೇಳು ಲಕ್ಷ ಐದು ಸಾವಿರ

(2) ಹದಿನೇಳು ಲಕ್ಷ ಐವತ್ತು ಸಾವಿರ

(3) ಹದಿನೇಳು ಲಕ್ಷ

(4) ಹದಿನೇಳು ಲಕ್ಷ ಐದು ಸಾವಿರದಾಮೂರುನೂರು

**71.** 12 ತಾಸು 18 ಮಿ. – 6 ತಾಸು 45 ಮಿ. = ಎಷ್ಟು?

(1) 5 ತಾಸು 73 ಮಿ. (2) 5 ತಾಸು 33 ಮಿ.

(3) 5 ತಾಸು 78 ಮಿ. (4) 6 ತಾಸು 27 ಮಿ.

**ಕೇವಲ ಕಚ್ಚಾ ಕೆಲಸಕ್ಕಾಗಿ**

**72.** What is the sum of all the divisors of 90?

(1) 233 (2) 228

(3) 204 (4) 234

**73.** If the fractions are arranged in ascending order, what will be double of the fraction at the second last place?

$\frac{1}{4}$ , $\frac{1}{7}$ , $\frac{1}{8}$ , $\frac{1}{2}$ , $\frac{1}{5}$

(1) $\frac{2}{7}$ (2) $\frac{2}{5}$

(3) $\frac{1}{2}$ (4) $\frac{2}{2}$

**74.** Ramesh and Sudha deposited same amount at two different places. Ramesh got interest at 8 p.c.p.a. and Sudha got interest at 7.5 p.c.p.a. If Ramesh has got Rs. 500 more than Sudha, then find the amount that Ramesh had deposited.

(1) Rs. 100000 (2) Rs. 50000

(3) Rs. 7500 (4) Rs. 150000

**75.** Choose the correct option to fill in the box.

932004 – ☐ = 59896

(1) 991900 (2) 927892

(3) 857898 (4) 872108

**SPACE FOR ROUGH WORK**

**72.** 90 ರ ಎಲ್ಲ ವಿಭಾಜಕಗಳ ಬೇರೀಜು ಎಷ್ಟು?

(1) 233 (2) 228

(3) 204 (4) 234

**73.** ಕೊಟ್ಟ ಅಪೂರ್ಣಾಂಕಗಳನ್ನು ಏರಿಕೆ ಕ್ರಮದಲ್ಲಿ ಮಂಡಿಸಲಾಗಿ ಕೊನೆಯಿಂದ ಎರಡನೆಯ ಅಪೂರ್ಣಾಂಕದ ಎರಡುಪಟ್ಟು ಎಷ್ಟು?

$\frac{1}{4}$ , $\frac{1}{7}$ , $\frac{1}{8}$ , $\frac{1}{2}$ , $\frac{1}{5}$

(1) $\frac{2}{7}$ (2) $\frac{2}{5}$

(3) $\frac{1}{2}$ (4) $\frac{2}{2}$

**74.** ರಮೇಶ ಮತ್ತು ಸುಧಾ ಇವರು ಒಂದು ವರ್ಷದ ಸಲುವಾಗಿ ಸಮಾನ ಹಣವನ್ನು ಬೇರೆ ಬೇರೆ ಸ್ಥಳಗಳಲ್ಲಿ ಠೇವಣಿ ಎಂದು ಇಟ್ಟರು. ರಮೇಶನಿಗೆ ಪ್ರ.ವ.ಪ್ರ.ಶೆ 8 ದರದಿಂದ ಹಾಗೂ ಸುಧಾಳಿಗೆ ಪ್ರ.ವ.ಪ್ರ.ಶೆ 7.5 ದರದಿಂದ ಬಡ್ಡಿ ದೊರೆಯಿತು; ಒಂದು ವೇಳೆ ರಮೇಶನಿಗೆ ಸುಧಾಗಿಂತ 500 ರೂಪಾಯಿ ಹೆಚ್ಚಿಗೆ ದೊರೆತಿದ್ದರೆ ರಮೇಶನು ಎಷ್ಟು ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದನು?

(1) 100000 (2) 50000

(3) 7500 (4) 150000

**75.** ಬರಿದಾದ ಚೌಕಟ್ಟಿನಲ್ಲಿ ಬರುವ ಯೋಗ್ಯ ಉತ್ತರದ ಪರ್ಯಾಯ ಆರಿಸಿರಿ.

932004 – ☐ = 59896

(1) 991900 (2) 927892

(3) 857898 (4) 872108

**ಕೇವಲ ಕಚ್ಚಾ ಕೆಲಸಕ್ಕಾಗಿ**

**ಕೇವಲ ಕಚ್ಚಾ ಕೆಲಸಕ್ಕಾಗಿ**